ದಿನಾಂಕ 05.08.2021 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ವಾದಿ ಪರ ಶ್ರೀ ಇ ಎನ್ ವಕೀಲರಿಂದಃ

6. ವಾದಿಯರು ಆರ್ ಸಿ ಪಾಟೀಲ್ ಇವರ ಹೆಣ್ಣುಮಕ್ಕಳು ಎಂದರೆ ಸರಿ. ವಾದಿಯರು ಹಾಗೂ ಪ್ರತಿವಾದಿ ನಂ. 2, 3 ನೇ ಪ್ರತಿವಾದಿಯ ಗಂಡ ಹಾಗೂ 4 ಮತ್ತು 5 ನೇ ಪ್ರತಿವಾದಿಯರ ತಂದೆ ಮಲ್ಲನಗೌಡ ಇವರು 1 ನೇ ಪ್ರತಿವಾದಿ ಮತ್ತು ಆರ್ ಸಿ ಪಾಟೀಲ್ ರಿಗೆ ಜನಿಸಿದ ಮಕ್ಕಳು ಎಂದರೆ ಸರಿ. ಆರ್ ಸಿ ಪಾಟೀಲ್ ರ ತಂದೆ ಚನ್ನಬಸಪ್ಪಗೌಡ ಇರುತ್ತದೆ. ಆರ್ ಸಿ ಪಾಟೀಲ್ ರ ತಾಯಿ ಹೆಸರು ಗೌರಮ್ಮ ಇರುತ್ತದೆ. ಆರ್ ಸಿ ಪಾಟೀಲ್ ಇವರ ಅಜ್ಜನ ಹೆಸರು ಚನ್ನಪ್ಪಗೌಡ ಇರುತ್ತದೆ. ಆರ್ ಸಿ ಪಾಟೀಲ್ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಅವರು ಸೊರಬ ಮತ್ತು ಸಾಗರ ಜಂಟಿ ಕ್ಷೇತ್ರದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿ. ಆರ್ ಸಿ ಪಾಟೀಲ್ ಮತ್ತು ಅವರ ಸಹೋದರರ ಮಧ್ಯ 1965 ರಲ್ಲಿ ವಿಭಾಗ ಆಗಿರುತ್ತದೆ. ನಾನು ಆ ವಿಭಾಗ ಪತ್ರ ಓದಿರುತ್ತೇನೆ. ಸದರಿ ವಿಭಾಗ ಪತ್ರ ಆದ ನಂತರ ಬಿಟ್ಟು ಹೋದ ಆಸ್ತಿಗಳನ್ನು ಕುರಿತಂತೆ 1972 ರಲ್ಲಿ ಇನ್ನೊಂದು ವಿಭಾಗ ಪತ್ರ ಆಗಿದೆ ಎಂದರೆ ಸರಿ. ದಿನಾಂಕ 29.11.1972 ರಂದ ಆರ್ ಸಿ ಪಾಟೀಲ್ ಮತ್ತು ಅವರ ಮಕ್ಕಳ ಮಧ್ಯೆ ವಿಭಾಗ ಪತ್ರ ಆಗಿದೆ ಎಂದರೆ ಸರಿ. ಆ ವಿಭಾಗ ಪತ್ರ ನಾನು ಓದಿರುತ್ತೇನೆ. ಅದು ನಿಡಿ 1 ಎಂದು ಗುರುತಿಸಲ್ಪಟ್ಟಿದೆ. ನಿಡಿ 1 ರಲ್ಲಿ ಪಿತ್ರಾರ್ಜಿತ ಆಸ್ತಿಗಳ ಕುರಿತಂತೆ ವಿಭಾಗ ಮಾಡಿಕೊಳ್ಳಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಡಿ 2 ನ್ನು ಬರೆದುಕೊಡಲು ಆರ್ ಸಿ ಪಾಟೀಲ್ ಇವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ 2 ರಲ್ಲಿ ಕಾಣಿಸಿದ ಆಸ್ತಿಗಳು ಆರ್ ಸಿ ಪಾಟೀಲ್ ರಿಗೆ ಕುಟುಂಬದ ಹಿಸ್ಸೆಯಲ್ಲಿ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ನಿಡಿ 2 ರಲ್ಲಿ ಕಾಣಿಸಿದ 2 ನೇ ಸ್ವತ್ತು ಆರ್ ಸಿ ಪಾಟೀಲ್ ರಿಗೆ ಕುಟುಂಬದ ಹಿಸ್ಸೆಯಲ್ಲಿ ಬಂದ ಸ್ವತ್ತಿಗೆ ಅದಲು-ಬದಲು ಮಾಡಿಕೊಂಡ ಸ್ವತ್ತು

ಎಂದರೆ ಸರಿ. ಆರ್ ಸಿ ಪಾಟೀಲರು ಯಾವುದೇ ಸ್ವತ್ತನ್ನು ಸ್ವಂತ ರೀತಿಯಿಂದ ಗಳಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳು ಆರ್ ಸಿ ಪಾಟೀಲ್ ರಿಗೆ ಪಿತ್ರಾರ್ಜಿತವಾಗಿ ಬಂದಿವೆ ಎಂದರೆ ಸರಿಯಲ್ಲ. ಆರ್ ಸಿ ಪಾಟೀಲ್ ರು ತಮ್ಮ ಜೀವಿತಾವಧಿಯಲ್ಲಿ ಯಾವುದೇ ಆಸ್ತಿಗಳನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ರೈಸ್ ಮಿಲ್ಲನ್ನು ಖರೀದಿಸಿರುತ್ತಾರೆ. ಆರ್ ಸಿ ಪಾಟೀಲ್ ದೊಡ್ಡ ಜಮೀನುದಾರರು ಎಂದರೆ ಸರಿ. ಪ್ರತಿವಾದಿ ನಂ. 8 ಅರ್ ಸಿ ಪಾಟೀಲ್ ಇವರ ಮನೆಯಲ್ಲಿ ಬಹಳ ವರ್ಷದಿಂದ ಕೆಲಸಕ್ಕೆ ಇದ್ದರು ಎಂದರೆ ಸರಿ. ಪ್ರತಿವಾದಿ ನಂ. 8 ಇವರೊಂದಿಗೆ ಸೇರಿ ನಿಡಿ 3 ಕ್ರಯಪತ್ರವನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಡಿ 3 ರಲ್ಲಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ.

7. ಆರ್ ಸಿ ಪಾಟೀಲ್ 31.01.2012 ರಂದು ತೀರಿಕೊಂಡಿರುತ್ತಾರೆ. 2005 ರ ನಂತರ ಆರ್ ಸಿ ಪಾಟೀಲ್ ರ ಆರೋಗ್ಯ ಅಷ್ಟೊಂದು ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಅಧಿಕ ರಕ್ತದೊತ್ತದ ಮತ್ತು ಮಧುಮೇಹ ಇತ್ತು ಎಂದರೆ ಸರಿಯಲ್ಲ. ಅವರಿಗೆ ಕಿಡ್ನಿ ಸಮಸ್ಯೆ ಇತ್ತು ಎಂದರೆ ಸರಿಯಲ್ಲ. ಅವರ ಎಲ್ಲಾ ವ್ಯವಹಾರಗಳಲ್ಲಿ ನಾನು ಅವರ ಜೊತೆಗೆ ಇರುತ್ತಿದ್ದೆ ಎಂದರೆ ಸರಿ. ಸಾಕ್ಷಿಯು ಪುನಃ ಮನೆಯಲ್ಲಿ ಅವರ ಜೊತೆಗೆ ಇರುತ್ತಿದ್ದೆ. ವ್ಯವಹಾರದಲ್ಲಿ ಇರುತ್ತಿರಲಿಲ್ಲ ಎಂದು ಹೇಳುತ್ತಾರೆ. ನಾನು ಮತ್ತು 3 ನೇ ಪ್ರತಿವಾದಿ ಒಂದೇ ಮನೆಯಲ್ಲಿ ಇದ್ದೇವೆ ಎಂದರೆ ಸರಿ. ನಾವು ಅಗಸನಹಳ್ಳಿಯ ಮನೆಯಲ್ಲಿ ಇರುತ್ತೇವೆ. ಈ ದಾವೆಯಲ್ಲಿ ನಾನು ಮತ್ತು 3 ನೇ ಪ್ರತಿವಾದಿ ಬೇರೆ ಬೇರೆ ವಕೀಲರನ್ನು ನೇಮಿಸಿಕೊಂಡಿದ್ದೇವೆ ಎಂದರೆ ಸರಿ. ಮಲ್ಲನಗೌಡ ತೀರಿಕೊಂಡ ನಂತರ 3 ನೇ ಪ್ರತಿವಾದಿ ನನ್ನ ಜೊತೆಗೆ ಇದ್ದಾರೆ ಎಂದರೆ ಸರಿಯಲ್ಲ. ಮೊದಲಿಂದಲೂ 3 ನೇ ಪ್ರತಿವಾದಿ ಮತ್ತು ಆಕೆಯ ಗಂಡ ನನ್ನ ಜೊತೆಯಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ನನಗೆ 7 ನೇ ಪ್ರತಿವಾದಿಯ ಪರಿಚಯ ಇದೆ. ನಾನು, ಪ್ರತಿವಾದಿ ನಂ. 3 ಮತ್ತು ಪ್ರತಿವಾದಿ ನಂ. 7 ಸೇರಿಕೊಂಡು

ನಿಡಿ 4 ರಂತೆ ಮರಣ ಶಾಸನ ಪತ್ರ ಮತ್ತು ನಿಡಿ 5 ರಂತೆ ದಾನಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ 4 ಮತ್ತು ನಿಡಿ 5 ಗಳನ್ನು ಬರೆಯಲು ಮತ್ತು ವಿಲೇವಾರಿ ಮಾಡಲು ಆರ್ ಸಿ ಪಾಟೀಲ್ ರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

8. ನಾನು ಮೂಲತಃ ಸಾಗರದವರು ಎಂದರೆ ಸರಿ. ನಾನು ಮೂಲತಃ ಹವ್ಯಕ ಬ್ರಾಹ್ಮಣ ಸಮುದಾಯಕ್ಕೆ ಸೇರಿರುತ್ತೇನೆ ಎಂದರೆ ಸರಿ. ಆರ್ ಸಿ ಪಾಟೀಲ್ ಲಿಂಗಾಯತ ಸಮುದಾಯಕ್ಕೆ ಸೇರಿರುತ್ತಾರೆ ಎಂದರೆ ಸರಿ. 1976 ರಲ್ಲಿ ನನಗೆ ಮೊದಲ ಬಾರಿಗೆ ಆರ್ ಸಿ ಪಾಟೀಲರ ಪರಿಚಯ ಆಗಿದೆ. ನಾನು ಆ ಸಮಯದಲ್ಲಿ ನ್ಯಾಶನಲ್ ಸ್ಟೂಡೆಂಟ್ಸ್ ಯೂನಿಯನ್ ನ ಕಾರ್ಯದರ್ಶಿಯಾಗಿದ್ದೆ. ಆಗ ಆರ್ ಸಿ ಪಾಟೀಲ್ ಜಿಲ್ಲಾ ಕಾಂಗ್ರೆಸ್ ನ ಉಪಾಧ್ಯಕ್ಷರಾಗಿದ್ದರು. ನಾನು ಈಗ ರಾಜ್ಯ ಬಾಲಭವನದ ನಿರ್ದೇಶಕಿಯಾಗಿರುತ್ತೇನೆ. 1 ನೇ ಪ್ರತಿವಾದಿಯು ಆರ್ ಸಿ ಪಾಟೀಲರ ಹೆಂಡತಿ ಎಂದರೆ ಸಾಕ್ಷಿಯು ಅವರು ಮೊದಲನೇ ಹೆಂಡತಿ ಎಂದು ಹೇಳುತ್ತಾರೆ. ನಾನು ಆರ್ ಸಿ ಪಾಟೀಲರ ಕಾನೂನುಬದ್ಧ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಆರ್ ಸಿ ಪಾಟೀಲರಿಗೆ ನಿಡಿ 2 ರಂತೆ ನನ್ನ ಹೆಸರಿಗೆ ಪಿತ್ರಾರ್ಜಿತ ಆಸ್ತಿಗಳನ್ನು ದಾನ ಮಾಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆರ್ ಸಿ ಪಾಟೀಲರು ವಾದಿಯರಿಗೆ ಯಾವುದೇ ಹಿಸ್ಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರ್ ಸಿ ಪಾಟೀಲ್ ಮತ್ತು ಅವರ ಅಲ್ಪವಹಿ ಗಂಡುಮಕ್ಕಳ ಮಧ್ಯೆ ಆದ ವಿಭಾಗ ಪತ್ರದ ಕಾಲಕ್ಕೆ ವಾದಿಯರು ಜನಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು 1985 ರಲ್ಲಿ ಆರ್ ಸಿ ಪಾಟೀಲರ ಅಗಸನಹಳ್ಳಿ ಮನೆಗೆ ಬಂದಿರುತ್ತೇನೆ. ನಾನು ಈ ರೀತಿಯಾಗಿ ಆರ್ ಸಿ ಪಾಟೀಲರ ಮನೆಗೆ ಬರುವ ಮೊದಲು ಅವರ ವಂಶವೃಕ್ಷದ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ನಾನು ಆರ್ ಸಿ ಪಾಟೀಲರನ್ನು ಕೇಳಿ ಅವರ ಹಿರಿಯರ ಬಗ್ಗೆ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿಯು ಧರ್ಮಪತ್ನಿಯಾಗಿ ಇದ್ದ ಸಮಯದಲ್ಲಿ ಆರ್ ಸಿ ಪಾಟೀಲರು ನನ್ನ ಜೊತೆ ಕಾನೂನು ಬಾಹಿರವಾಗಿ

ಜೀವನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಇರುವ ವಾದಿಯರ ಜನ್ಮಸಿದ್ಧ ಹಕ್ಕನ್ನು ನಷ್ಟಗೊಳಿಸಲು ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರ್ ಸಿ ಪಾಟೀಲರು ತಮ್ಮ ಜೀವಿತ ಕಾಲದಲ್ಲಿ ದಾವಾ ಆಸ್ತಿಗಳನ್ನು ಯಾವತ್ತೂ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತಾರ್ಜಿತ ಆಸ್ತಿಗಳು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮಾಡಿಕೊಂಡಿರುವ ದಾನಪತ್ರಗಳು, ಕ್ರಯಪತ್ರಗಳು ವಾದಿಯರ ಹಕ್ಕಿಗೆ ಬಾಂದಹಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಬಿಎ ಪದವೀಧರೆ ಇರುತ್ತದೆ. ವಾದಿಯರಿಗೆ ಅವರು ಕೇಳಿದಂತೆ ದಾವಾ ಆಸ್ತಿಗಳಲ್ಲಿ ಭಾಗ ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.